Available online at www.elixirpublishers.com (Elixir International Journal)

Literature

Elixir Literature 116 (2018) 48894-48896

ISSN: 2229-712X

# Edge time of the Bayalatagalu
# ಅವಸಾನದ ಅಂಚಿಗೆ ಬಯಲಾಟಗಳು

Bullannavar Basusab, ಬುಳ್ಳಣ್ಣವರ ಬಾಸೂಸಾಬ
ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ, Govt First Grade College Gadag, Karnataka

**ARTICLE INFO**

**Article history:**
Received: 12.January 2018;
Received in revised form:
10 February 2018;
Accepted: 15 March 2018;

**Keywords**
Bigdrama – ದೊಡ್ಡಾಟಗಳು
Bayalatagalu – ಬಯಲಾಟ
Sikla – ಕೌಶಲ್ಯ
Viraputra – ವೀರಪುತ್ರ
Personality – ವ್ಯಕ್ತಿತ್ವ

**ABSTRACT**
Like a theater person. Disclosures have brought about changes in a person's life. Formed a personality. From the great poems of Ramayana, Mahabharata, and other social events, the stories are classified as Radhanata. The rural artists are depressed without encouragement.
ರಂಗಭೂಮಿ ವ್ಯಕ್ತಿ ಇದ್ದಂತೆ. ಬಯಲಾಟಗಳು ವ್ಯಕ್ತಿಯ ಬದುಕಿನಲ್ಲಿ ಬದಲಾವಣೆಗಳನ್ನು ತಂದಿವೆ. ವ್ಯಕ್ತಿತ್ವ ರೂಪಿಸಿವೆ. ಪುರಾಣ ಪುಣ್ಯ ಕತೆಗಳಿಂದ ರಾಮಾಯಣ, ಮಹಾಭಾರತಗಳ ಮಹಾ ಕಾವ್ಯಗಳಿಂದ ಹಾಗೆ ಕಣ್ಮುಂದೆ ಸುಳಿದ ಸಾಮಾಜಿಕ ಘಟನಾವಳಿಗಳಿಂದ ರೂಪಗೊಂಡ ಬಯಲಾಟಗಳು, ದೊಡ್ಡಾಟ, ಸಣ್ಣಾಟಗಳೆಂದು ರಾಧಾನಾಟವೆಂದು ವರ್ಗೀಕರಣಗೊಂಡಿವೆ.ರಂಗಭೂಮಿ ಕ್ರಿಯಾಶೀಲತೆಯನ್ನು ಜೀವಾಳವಾಗಿಟ್ಟು ಬಂದದು, ಆಶ್ರಯವಿಲ್ಲದೆ ಬಯಲಾಟಗಳು ಸೊರಗುತ್ತಿವೆ. ಪ್ರೋತ್ಸಾಹ ಕಾಣದೆ ಗ್ರಾಮೀಣ ಕಲಾವಿದರು ಕಂಗಾಲಾಗಿದ್ದಾರೆ.

© 2018 Elixir All rights reserved.

## 1. ಪೀಠಿಕೆ:

ತಾಯಿಯ ಗರ್ಭದಿಂದ ಹೊರಬಂದ ಮಗು ಕೈಕಾಲು ಆಡಿಸಿದಾಗಲೇ ಆಂಗಿಕ ಅಭಿನಯ ಬಂದಿದೆ ಎಂದು ಹೇಳಿದ ರಂಗ ತಜ್ಞರು ಮಾನವನಿಗೆ ತಿಳುವಳಿಕೆ ಮೂಡಿದಂದಿನಿಂದ ಈ ಜನಪದ ಕಲೆಗಳು ಸೃಷ್ಟಿಗೊಂಡಿವೆಯೆಂಬುದನ್ನೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವಿಶೇಷವಾಗಿ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿನನಗೆ ತಿಳಿದಂತೆ ಜನಪದ ಕಲೆಗಳು ಜನರ ಮನ ತಣಿಸಿದಂತೆ ಇನ್ನಾವುದೇ ಕಲಾ ಮಾಧ್ಯಮಗಳು ತಣಿಸಿಲ್ಲವೆಂಬುದು ಸತ್ಯ. ಇಡೀ ಜಗತ್ತನ್ನೇ ಕ್ಷಣ ಮಾತ್ರದಲ್ಲಿ ತೋರಿಸುವ ದೂರದರ್ಶನವಾಗಲಿ, ಹಿರಿ ತೆರೆಯೆನಿಸಿದ ಸಿನಿಮಾಗಳಾಗಲೀ ಯಾವುದೂ ಸಾಟಿಯಾಗಿಲ್ಲ. ಅನುಭವಿಗಳು ಹೇಳಿದಂತೆ "ಕಿರುತೆರೆ ಅಂದರೆ ಟಿ.ವಿ. ಗಳು ಇರುವ ವ್ಯಕ್ತಿಗಳನ್ನು ಕಿರಿದಾಗಿ ತೋರಿಸಿದರೆ ಹಿರಿತೆರೆ ಸಿನಿಮಾ ದೊಡ್ಡದಾಗಿ ತೋರಿಸುತ್ತದೆ. ಆದರೆ ರಂಗಭೂಮಿ ವ್ಯಕ್ತಿ ಇದ್ದಂತೆ ಇದ್ದ ಹಾಗೆ ತೋರಿಸುತ್ತದೆ" ಎನ್ನುವ ಅಭಿಪ್ರಾಯ ಅದು ಸರ್ವಕಾಲಕ್ಕೂ ಸತ್ಯವಾಗಿದೆ. ಕ್ರಿಯಾಶೀಲತೆಯನ್ನು ಜೀವಾಳವಾಗಿಟ್ಟು ಬಂದದು ಈ ರಂಗಭೂಮಿ.

## 2. ವಿಷಯ:

ಬಹುತೇಕ ಗೊಂದಲಿಗರು, ಕಿಳ್ಳೆಕ್ಯಾತರು, ತೊಗಲುಗೊಂಬೆ ಆಟಗಾರರು, ಮೊಹರಂನ ರಿವಾಯತ್ ಪದಗಳು, ಕವಲೆತ್ತು ಕುಣಿತ, ಹಗಲು ಕುಣಿತ, ಹಗಲು ವೇಷಗಾರರು ಬಹು ಹಿಂದಿನ ಕಾಲದಿಂದ ಜನಮನವನ್ನು ರಂಜಿಸಿದ್ದಾರೆ. ಹಾಗೆ ಇಡೀ ರಾತ್ರಿ ಜನರನ್ನು ಕೂಡುವಂತೆ ಮಾಡಿ ತಿಳುವಳಿಕೆಯನ್ನು ಮೂಡಿಸಿದ್ದಾರೆ. ಹಾಗಾಗಿ ಅಂದಿನಿಂದಲೇ ಬಯಲಾಟಗಳು ಜನ್ಮ ತಳಿದಿವೆ.

ಪುರಾಣ ಪುಣ್ಯ ಕತೆಗಳಿಂದ ರಾಮಾಯಣ, ಮಹಾಭಾರತಗಳ ಮಹಾ ಕಾವ್ಯಗಳಿಂದ ಹಾಗೆ ಕಣ್ಮುಂದೆ ಸುಳಿದ ಸಾಮಾಜಿಕ ಘಟನಾವಳಿಗಳಿಂದ ರೂಪಗೊಂಡ ಬಯಲಾಟಗಳು, ದೊಡ್ಡಾಟ, ಸಣ್ಣಾಟಗಳೆಂದು ರಾಧಾನಾಟವೆಂದು ವರ್ಗೀಕರಣಗೊಂಡಿವೆ. ಹಾಗೆ ಯಕ್ಷಗಾನವನ್ನು ಪಡುವಲಪಾಯವೆಂದು ಕರೆದು ಈ ಮೂಡಲಪಾಯದಲ್ಲಿ ಇವೆಲ್ಲವೂ ಸಂಗಮಗೊಂಡಿವೆ.

**Tele: 8861814506**
**E-mail addresses: bullannavarbasusab@gmail.com**
**© 2018 Elixir All rights reserved**

## 1. Introduction

Theater experts who said that the physical performance came when the child came out of the mother's womb and played its hands and feet, the scholars are also of the opinion that these folk arts were created when people became aware of them. It is a fact that no other art medium has quenched the hearts of people as far as I know, especially in the Hyderabad-Karnataka region. Nothing compares to the television that shows the whole world in just a moment, nor to the movies that have been opened for so long. As the veterans say, "Small screen means T.V. If people with s are shown narrowly, widescreen cinema shows them large. But the theater shows the person as he is" is true for all times. This theater has kept activism alive.

## 2. Content

Mostly conjurers, puppeteers, puppeteers, recitations of Muharram, Kavalethu Kunita, Hagalu Kunita, Hagalu Veshakars have entertained the public since long ago. They made people gather for the whole night and created awareness. So that's why open spaces were born.

From the stories of Purana Punya, Ramayana, the great poems of Mahabharata, which are formed from the social events that have arisen, they are classified as Radhanata. Thus Yakshagana is called as Paduvalapaya and all these things have converged in this mudalapaya.

ಬಯಲಾಟಗಳು ವ್ಯಕ್ತಿಯ ಬದುಕಿನಲ್ಲಿ ಬದಲಾವಣೆಗಳನ್ನು ತಂದಿವೆ. ವ್ಯಕ್ತಿತ್ವ ರೂಪಿಸಿವೆ. ಮೂವತ್ತು ವರುಷಗಳಷ್ಟು ಹಿಂದೆ ಬಯಲಾಟಗಳು ಉಚ್ಛ್ರಾಯದ ಘಟ್ಟದಲ್ಲಿದ್ದವು. ಆಗಿನ ಸಂದರ್ಭ ನೆನಸಿಕೊಂಡರೆ ಈಗಲೂ ರೋಮಾಂಚನವಾಗುತ್ತದೆ. ಮೈಜುಂ ಎನ್ನುತ್ತದೆ ಎಂತಹುದೋ ಪುಳಕ; ಜೀವ ಧನ್ಯ ಎನಿಸುತ್ತದೆ.

- ❖ ಗೆಜ್ಜೆ ಪೂಜೆ ಮಾಡಿ ಅಟ ಪ್ರಾರಂಭಿಸಿದಾಗಿಂದಲೂ ಊರಿಗೆ ಸಡಗರ ಬಂದಂತಾಗುತ್ತಿತ್ತು.
- ❖ ಹಾಗೆ ರಂಗತಾಲೀಮಿನ ದಿನ ಊರ ಪಂಚರು ಆಟ ವೀಕ್ಷಿಸಿ ಪ್ರದರ್ಶನದ ದಿನಾಂಕವನ್ನು ನಿಗದಿ ಮಾಡುತ್ತಿದ್ದರು.
- ❖ ಆಟಕ್ಕಾಗಿ ಕಂಬ ಹಾಕಿದಾಗಿಂದಲೇ ಬೀಗರು ಬಿಜ್ಜರು ಬರುವುದು ಪ್ರಾರಂಭವಾಗುತ್ತಿತ್ತು. ಆಟದ ದಿನ ಪಾತ್ರಧಾರಿಗಳ ಮನೆಯಲ್ಲಿ ಹುಗ್ಗಿ, ಹೋಳಿಗೆಯ ಸಂಭ್ರಮ.
- ❖ ಆಟದ ಮಾಸ್ತರ ಅಥವಾ ಸಾರಥಿ ಮಧು ಮಗನಂತಾಗಿರುತ್ತಿದ್ದರು. ಅಂದು ಅವರಿಗೆ ಹೊಸ ಬಟ್ಟೆ ನೀಡುತ್ತಿದ್ದರು.
- ❖ ಐದಾರು ತಿಂಗಳು ಆಟ ಕಲಿಸಿದ ಮಾಸ್ತರ ಆ ಊರಿನ ಪಂಚರ ಸ್ಥಾನ ತೆಗೆದುಕೊಂಡಿರುತ್ತಿದ್ದ,ಆ ಹಳ್ಳಿಯ ಎಷ್ಟೋ ವ್ಯಾಜ್ಯಗಳು ತಿಪ್ಪೆಯ ಜಗಳ, ಹೊಲದ ಬದುವಿನ ಜಗಳ, ಮನೆಯ ಹಿತ್ತಲು ಅಥವಾ ಮನೆಯ ಮುಂದಿನ ದಾರಿಯ ಜಗಳಗಳು ಇಂಥಹ ಎಷ್ಟೋ ಜಗಳಗಳು ನ್ಯಾಯಾಲಯದ ಮೆಟ್ಟಲೇರುತ್ತಿದ್ದವು. ಆದರೆ ಬಯಲಾಟದ ಮಾಸ್ತರರು ತಾಲೀಮಿನ ಮನೆಯಲ್ಲಿಯೇ ಬಗೆಹರಿಸಿ ಜನರಲ್ಲಿ ಪ್ರೀತಿ, ವಿಶ್ವಾಸ, ಬೆಸೆಯುತ್ತಿದ್ದರು.
- ❖ ಬಹುತೇಕ ಸರಕಾರ ಮಾಡಿ ಫಲ ಕಾಣದಂತಾದ ಸಾಕ್ಷರತಾ ಆಂದೋಲನ, ಆಟದ ಸಂಭಾಷಣೆ ಕಲಿಯಲು ಎಷ್ಟೋ ಜನರು ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ತಾಲೀಮಿನ ಮನೆಯಲ್ಲಿಯೇ ಆಟದ ಮಾಸ್ತರರಿಂದ ಅಕ್ಷರ ಕಲಿತು ಸಾಕ್ಷರಾದ ಬಗ್ಗೆ ದಾಖಲೆ ನೀಡಬಹುದು.

ಒಟ್ಟಾರೆ ಮಾನವನ ಸಮಗ್ರ ಬದಲಾವಣೆಗೆ ಅಷ್ಟೇ ಏಕೆ ಆತ್ಮೋನ್ನತಿಗೆ ಈ ಬಯಲಾಟಗಳು ಕಾರಣವಾಗಿವೆ ಎಂದರೆ ಖಂಡಿತವಾಗಿಯೂ ಅತಿಶಯೋಕ್ತಿಯಲ್ಲ, ಮಳೆ ಬಾರದೆ ಅನಾವೃಷ್ಟಿಯುಂಟಾದಾಗ ಆಟದಲ್ಲಿ ಪಾತ್ರ ವಹಿಸಿದವರು ಬ್ರಹ್ಮಚರ್ಯ ಪಾಲನೆ ಮಾಡಿ ಮಡಿಉಡಿಯಿಂದ ವಿರಾಟಪರ್ವ. ಶ್ರೀದೇವಿ ಮಹಾತ್ಮ ಆಟ ಪ್ರದರ್ಶಿಸುತ್ತಿದ್ದರು. ಅವುಗಳಿಂದ ವರುಣ ದೇವ ಸಂತೃಪ್ತಿಗೊಂಡು ಮಳೆ ತರಿಸುವ ನಂಬಿಗೆ ಅವರಲ್ಲಿತ್ತು. ಆ ನಂಬುಗೆ ನಿಜವಾದ ನಿದರ್ಶನಗಳೂ ಇವೆ. ಶ್ರೀದೇವಿ ಮಹಾತ್ಮ ಆಟ ಇದ್ದಾಗ ಆಟ ವೀಕ್ಷಿಸಲು ಬಂದವರೂ ಕೂಡ ಭಕ್ತಿಭಾವ ಮಡಿಯಿಂದಲೇ ಬರುತ್ತಿದ್ದರು. ಹೆಂಗಸರ ತಿಂಗಳ ಕೋರ್ಸು ಆದವರು ಆಟಕ್ಕೆ ಬರುತ್ತಿರಲಿಲ್ಲ ಅದನ್ನು ಮೈಲಿಗೆಯೆಂದು ಭಾವಿಸಲಾಗುತ್ತಿತ್ತು.

ದಕ್ಷಬ್ರಹ್ಮ ಆಟದಲ್ಲಿ ಅಹಂಕಾರದ ಅಳಿವನ್ನು, ಗಿರಿಜಾ ಕಲ್ಯಾಣ ಆಟದಲ್ಲಿ ಕಾಮದಹನವನ್ನು, ದ್ರೌಪದಿ ವಸ್ತ್ರಾಪಹರಣ ಆಟದಲ್ಲಿ ದಾಯಾದಿಗಳ ಕ್ರೌರ್ಯವನ್ನು.1 ವೀರ ಅಭಿಮನ್ಯುವಿನ ಆಟದಲ್ಲಿ ಅದ್ಭುತಶೌರ್ಯ, ವೀರೋಚಿತವಾದ ಯುದ್ಧ ಕೌಶಲ್ಯವನ್ನು ಹೀಗೆ ಯಾವುದೇ ಕಥೆಯಿರಲಿ ಅದು ಮಹಾ ಕಾವ್ಯಗಳನ್ನು ಆಧರಿಸಿ ಇರಬಹುದು.2 ಪುರಾಣ ಕತೆಯೇ ಇರಬಹುದು ಅಥವಾ ಸಣ್ಣಾಟದಲ್ಲಿ ಬಂದ ಪ್ರಸ್ತುತ ಸಂದರ್ಭದ ಸಂಗ್ಯಾ–ಬಾಳ್ಯಾನೇಯಿರಬಹುದು, ಅದೆಲ್ಲಾ ತಿಳಿಸುವುದು ಪರಸ್ತ್ರೀ ಸಂಗತರವಲ್ಲವೆಂಬುದು, ಮಹಿಳೆಯನ್ನು ಗೌರವಿಸಬೇಕೆನ್ನುವುದೇ ಆಗಿದೆ.

ಶರಣರಾಟಗಳಲ್ಲಿ ಅಲ್ಲಮನಾಟ ಮಾಯಾ ಕೋಲಾಹಲವೆಂದು ಖ್ಯಾತಿಯಾಗಿ ಮನದ ಮುಂದಣ ಆಶೆಯನ್ನು ಗೆಲ್ಲುವ ಮಾರ್ಗವನ್ನು ಶರಣರು ತೋರಿದ ಬಗೆಯನ್ನು ಚಿತ್ರಿಸಿದ್ದು, ಬಯಲಾಟಗಳಲ್ಲಿ ಎರಡು ವಿಧಗಳಿದ್ದು ದೊಡ್ಡಾಟ, ಸಣ್ಣಾಟವೆಂದು ವಿಭಾಗಿಸಿದ್ದಾರೆ. ಕಥಾಹಂದರ, ವೇಷಭೂಷಣ, ಸಂಭಾಷಣೆ, ವಾದ್ಯಮೇಳ (ಪೀಟಿಲು, ಹಾರ್ಮೋನಿಯಂ, ಮದ್ದಳೆ ತಾಳ, ಹಿಮ್ಮೇಳ, ಮುಮ್ಮೇಳ) ಹೀಗೆ ಅಟ್ಟದಿಂದ ಹಿಡಿದು ಎಲ್ಲದೂ ಹಿರಿತನವನ್ನು ತೋರುವುದು ದೊಡ್ಡಾಟವಾದರೆ, ಸಣ್ಣ ಆಟ ವೇಷಭೂಷಣದ ಭಾರಿ ಅಲಂಕಾರವಿಲ್ಲದೇ ಕೇವಲ ಒಂದು ದಪ್ಪಿನಲ್ಲೇ ರಂಜಿಸುವುದು ಸಣ್ಣಾಟವೆನಿಸುತ್ತದೆ. ಸಂಗ್ಯಾ–ಬಾಳ್ಯಾ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ್, ಬಸವಂತ–ಬಲವಂತ, ಚಿತ್ರಪತಿರಾಜ ಮುಂತಾದವು ಈಗಲೂ ನಮ್ಮಲ್ಲಿ ಪ್ರದರ್ಶನಗೊಳ್ಳುತ್ತಿವ.

Disclosures have brought about changes in a person's life. Formed a personality. Thirty years ago Bayalatas were at their peak. It is still thrilling to remember the occasion. Maijum is a kind of pulaka; Life feels blessed.

- ❖ Even when Gejje worshiped and started playing, people would come to the town.
- ❖ Like this, on the day of stage rehearsal, the village panch used to watch the play and fix the date of the performance.
- ❖ As soon as the pole was put up for the game, the bells and whistles started coming. On the day of the game, Huggie, Holi celebration at the house of the protagonists.
- ❖ The game master or charioteer was like Madhu son. They used to give him new clothes that day.
- ❖ The master who had taught the game for five or six months had taken the place of panchar of that town, so many disputes in that village, such as the tippe quarrel, the dispute over the right of the field, the quarrels in the backyard of the house or the front path of the house, so many such quarrels were going to the court. But masters of Bayalata settled in the house of training and instilled love, trust and harmony in people.
- ❖ Literacy movement which most of the government did not bear fruit, so many people can get up at four in the morning to learn the conversation of the game and learn the alphabet from the game master at the training house and give a record about literacy.

It is definitely not an exaggeration why these revelations are responsible for the complete change of the whole human being. When there was no rain and there was a drought, those who played the role of the game practiced celibacy and performed the Virataparva, Sridevi Mahatma game. They believed that they would bring rain to satisfy Lord Varuna. There are also real examples of that belief. When there was a Sridevi Mahatma game, even those who came to watch the game used to come with devotion. Those who were the women's course of the month did not come to the game, it was considered a miliege.

The destruction of ego in the play of DakshaBrahma, the burning of lust in the play of Girija Kalyana, the cruelty of Daayadi in the play of draupadi, the marvelous bravery in the play of Vira Abhimanyu, be it based on the great poems, may be the story of Purana or Sangya-Balyana of the present situation, all of them are told by Parastri Sangatara , It is to respect a woman.

In sharanatras, Allamanata is known as magic uproar, depicting the way the sharana showed the way to win the hope of the mind. Storyline, costumes, dialogues, musical accompaniment (pitilu, harmonium, maddale tala, himmela, mummela) and so on, if it is grandiose to show the seniority, then a small play without the heavy decoration of costume seems to be entertaining in just one piece. Sangya-Balya, Kadlimatti Station Master, Basavanta-Balavatha, Chitrapatiraja etc. are still performing in our country.

ಬಯಲಾಟಗಳನ್ನು ಎರಡು ಭಾಗಗಳಾಗಿ ಮಾಡಿ ಮೂಡಲ ಪಾಯಕ್ಕೆ ನಮ್ಮನ್ನು ಸೀಮಿತಗೊಳಿಸಿ ಪಡುವಲ ಪಾಯಕ್ಕೆ ಯಕ್ಷಗಾನವನ್ನು ಸೇರಿಸಿಕೊಂಡು ಅದರಲ್ಲಿ ಸಾಧ್ಯಂತವಾದ ಬದಲಾವಣೆಗಳನ್ನು ಮಾಡಿಕೊಂಡು ಅದಕ್ಕೊಂದು ಕಾಯಕಲ್ಪವನ್ನು ಕರುಣಿಸಿದವರು ಡಾ॥ ಶಿವರಾಂ ಕಾರಂತರು.
ಯಕ್ಷಗಾನವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋದರವರು, ಈಗಲೂ ಧರ್ಮಸ್ಥಳದ ಹೆಗಡೆಯವರು ಯಕ್ಷಗಾನಕ್ಕೆ ಆಧಾರ ಸ್ಥಂಭವಾಗಿದ್ದಾರೆ. ಇದನ್ನು ಗಮನಿಸಿದಾಗ ನಮ್ಮ ದೊಡ್ಡಾಟಗಳಿಗೆ ಅಂಥಹ ಆಶ್ರಯದಾತರು ಸಿಗಲಿಲ್ಲ. ಇದರಿಂದ ಮೂಡಲಪಾಯದ ಬಯಲಾಟಗಳು, ಮೂಡಣದಿ ಹೊಂಗಿರಣಗಳನ್ನು ಚಲ್ಲದೆ ಕಾರ್ಮೋಡದ ಮರೆಯಲ್ಲಿ ಮಂಕಾಗಿವೆ.

ನಮ್ಮ ಭಾಗದಲ್ಲಿ ನೀಲಕಂಠೇಶ್ವರ ದೇವಾಲಯದಿಂದ ಗಂಗಾವತಿಯಲ್ಲಿ ನಿರಂತರ ದೊಡ್ಡಾಟ ಪ್ರದರ್ಶನಗೊಳ್ಳುತ್ತಿವೆ. ಹಾಗೆ ಕಂಪ್ಲಿ, ಮುದ್ದಾಪೂರ, ಮುತ್ತೂರು ಭಾಗದಲ್ಲಿ ಆಗಾಗ ದೊಡ್ಡಾಟಗಳು ಜನರನ್ನು ಈಗಲೂ ರಂಜಿಸುತ್ತಿವೆ. ಆಧ್ಯಾತ್ಮ ಕ್ಷೇತ್ರದ ದಿಗ್ಗಜರಾಗಿದ್ದ ಚಿಕೇನಕೊಪ್ಪದ ಶ್ರೀಚನ್ನವೀರ ಶರಣರು ಬಯಲಾಟಗಳೀಗೆ ಪ್ರೋತ್ಸಾಹ ನೀಡುತ್ತಿದ್ದರು. ಈಗ ಆಶ್ರಯವಿಲ್ಲದೆ ನಮ್ಮ ಭಾಗದಲ್ಲಿ ಬಯಲಾಟಗಳು ಸೊರಗುತ್ತಿವೆ. ಪ್ರೋತ್ಸಾಹ ಕಾಣದೆ ಗ್ರಾಮೀಣ ಕಲಾವಿದರು ಕಂಗಾಲಾಗಿದ್ದಾರೆ. ಅದೇ ರೀತಿ ವಿಜಾಪೂರು, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ನೂರಾರು ಪಾರಿಜಾತ ತಂಡಗಳಿದ್ದು, ಸರಕಾರದ ದಿವ್ಯ ನಿರ್ಲಕ್ಷ್ಯಕ್ಕೆ ರೋಸಿ ಹೋಗಿದ್ದಾರೆ. ಇನ್ನೂ ಮುಂದಾದರೂ ಅವಸಾನದ ಅಂಚಿನಲ್ಲಿರುವ ಈ ರಂಗ ಕಲೆಗಳ ಬಗ್ಗೆ ಸರಕಾರ ಗಮನಹರಿಸಬೇಕಾಗಿದೆ. ದೊಡ್ಡ ದೊಡ್ಡ ಮಠಾಧೀಶರು, ಶ್ರವಣ ಮಾಧ್ಯಮವಾದ ಪುರಾಣಗಳಷ್ಟೇ, ದೃಶ್ಯ ಮಾಧ್ಯಮವಾದ ಬಯಲಾಟಗಳು ಪ್ರಾಮುಖ್ಯವೆಂದು ಭಾವಿಸಿ ಅವುಗಳನ್ನು ಪೋಷಿಸುವಂತಾಗಬೇಕು.

**3. ಉಪಸಂಹಾರ:**

ಗಂಗಾವತಿಯ ನೀಲಕಂಠೇಶ್ವರ ದೇವಸ್ಥಾನದ ಟ್ರಸ್ಟಿಗಳಂತೆ ವರುಷಕ್ಕೊಮ್ಮೆಯಾದರೂ ಬಯಲಾಟಗಳಿಗೆ ಉತ್ತೇಜನ ನೀಡಿ ಪ್ರೋತ್ಸಾಹಿಸುವ ದೇವಸ್ಥಾನದ ಟ್ರಸ್ಟಿಗಳು ಹೆಚ್ಚಾಗಬೇಕಿವೆ ಹಾಗೆಯೇ ಸರ್ಕಾರ ಮಾಡುವ ಉತ್ಸವಗಳಲ್ಲಿ ಕಡ್ಡಾಯವಾಗಿ ದೊಡ್ಡಾಟ, ಸಣ್ಣಾಟ, ರಾಧಾನಾಟ, ಪಾರಿಜಾತಗಳಿಗೆ ಆಧ್ಯತೆಯನ್ನಿತ್ತು, ಅವುಗಳನ್ನು ಪ್ರೋತ್ಸಾಹಿಸಬೇಕಿದೆ. ಅದೇ ರೀತಿಯಾಗಿ ಸರ್ಕಾರದ ಅಂಗ ಸಂಸ್ಥೆಗಳಾದ ಅಕಾಡೆಮಿಗಳು ಈ ನಿಟ್ಟಿನಲ್ಲಿ ಗಮನಹರಿಸಿ ಈ ಬಯಲಾಟಗಳಿಗೆ ತರಬೇತಿದಾರರನ್ನು ನೇಮಿಸಿ ಅಂಥಹ ಪ್ರದರ್ಶನಗಳಿಗೆ ಧನ ಸಹಾಯವನ್ನು ಮಾಡಬೇಕಿದೆ. ಅಂದಾಗ ಮಾತ್ರ ಈ ಕಲೆಗಳನ್ನುಳಿಸಿಕೊಳ್ಳಬಹುದು.

**ಪರಾಮರ್ಶನ ಗ್ರಂಥಗಳು:**


೧ ನಲವಡಿ ಶ್ರೀಕಂಠಶಾಸ್ತ್ರಿಕೃತ – "ದೌಪದಿ ವಸ್ತ್ರಾಪರಣ" ಮೂಡಲಪಾಯ ಬಯಲಾಟ.

೨ ನಲವಡಿ ಶ್ರೀಕಂಠಶಾಸ್ತ್ರಿಕೃತ – "ವೀರ ಅಭಿಮನ್ಯು ಮೂಡಲಪಾಯ ಬಯಲಾಟ

೩ ಮಲ್ಲಿಕಾರ್ಜುನ ಹೂಗಾರ –ಕರ್ಣಾರ್ಜುನರ ಕಾಳಗ ಬಯಲಾಟ


By dividing the Bayalatas into two parts and limiting ourselves to Mudala Paya, adding Yakshagana to Paduvala Paya and making possible changes in it, he gave a Kayakalpa to it, Dr.|| Shivram Karantaru.
Hegade of Dharamsthala, who took Yakshagana to the international level, is still the pillar of Yakshagana. Noticing this, our ventures did not find such patrons. Due to this, the plains of Mudalapaya, Mudanadi hongirans are not moving and faded in the shadow of Karmoda.

In our part, continuous dances are being performed in Gangavati from Neelkantheshwar temple. For example, in Kampli, Muddapur, and Muttur areas, occasional dodatas are still entertaining people. Srichannaveera Sharan of Chikenakoppa, who was a stalwart in the field of spirituality, encouraged Bayalata. Now without shelter the open spaces are languishing in our side. The rural artists are depressed without encouragement. Similarly, there are hundreds of parijata teams in Bijapur, Bagalkote and Belgaum districts, and they have gone mad due to the neglect of the government. Even further, the government needs to focus on these theater arts which are on the verge of extinction. Great patriarchs should consider and nurture the visual medium of revelations as important as the auditory medium of Puranas.

**3. Conclusion**

Like the trustees of Neelkantheshwara temple in Gagawati, there should be more temple trustees who encourage and encourage fairs at least once in a year. Also, in the festivals conducted by the government, doddata, sunnata, radhanata and parijata should be mandatory and they should be encouraged. In the same way, the academies, affiliated institutions of the government, should pay attention to this and appoint trainers for these exhibitions and provide financial assistance for such exhibitions. Only then can these arts be removed.

**Reference Books**


1. Nalavadi Sri Kantha Shastrikrita -"Daupadi Vastraparana" Mudalapaya bayalata.
2. Nalavadi Sri Kanthashastikrita -"Veera Abhimanyu Mudalapaya bayalata
3. Mallikarjuna Hugara-Karnarjuna's fight.